## ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊನ್ನಾಳಿ

ಸಿ.ಸಿ.89/2023

ಸಾಕ್ಷಿದಾರರ ಹೇಳಿಕೆಃ

| | | | | |
|---|---|---|---|---|
| ಹೆಸರು | : | ಅಕ್ಕಮ್ಮ | CW: 2 | PW: 2 |
| ಗಂಡನ ಹೆಸರು | : | ಸಣ್ಣ ಭೀಮಣ್ಣ | | |
| ವಯಸ್ಸು | : | 70 | | |
| ವೃತ್ತಿ | : | ಮನೆಕೆಲಸ | | |
| ವಾಸಸ್ಥಳ | : | ಮುಸ್ಸೇನಾಳು | | |

ದಿನಾಂಕಃ 21.02.2026 ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಭೋಧಿಸಲಾಯಿತು.

ಮುಖ್ಯವಿಚಾರಣೆಃ - ಮಾನ್ಯ ಸ.ಸ.ಅ.ರವರಿಂದಃ-

ಆರೋಪಿ ಗೊತ್ತಿಲ್ಲ. ಚಾಸಾ 3 ರವರು ಗೊತ್ತು. ಚಾಸಾ 1 ಮತ್ತು 4 ರವರು ಗೊತ್ತಿಲ್ಲ. ಮೃತ ಚೆನ್ನಮ್ಮ ಗೊತ್ತು. ಈ ಪ್ರಕರಣದ ಬಗ್ಗೆ ನನಗೆ ಏನು ಗೊತ್ತಿಲ್ಲ. ನಾನು ಯಾವುದೇ ಅಪಘಾತ ನೋಡಿಲ್ಲ. ಈ ಪ್ರಕರಣದ ಸಂಬಂಧ ನಾನು ಪೊಲೀಸರಿಗೆ ಯಾವುದೇ ಹೇಳಿಕೆ ಮತ್ತು ಮುಂದುವರೆದ ಹೇಳಿಕೆಯನ್ನು ನೀಡಿರುವುದಿಲ್ಲ.

(ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ ರವರು ಅನುಮತಿ ಕೋರಿದ್ದಾರೆ. ಸೂಕ್ತ ಕಾರಣ ನೀಡಿದ ಮೇರೆಗೆ ಅನುಮತಿ ನೀಡಲಾಗಿದೆ.)

ಪಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದಃ-

ದಿಃ 21.06.2022 ರಂದು ನಾನು ಹಾಗೂ ಚಾಸಾ 3 ಹಾಗುಾ ಮೃತ ಚೆನ್ನಮ್ಮರವರು ಹರಿಹರದಲ್ಲಿ ನಮ್ಮ ಸಂಬಂಧಿಕರ ಮನೆಯಲ್ಲಿ ಕಾರ್ಯಕ್ರಮವಿದ್ದು ಅಲ್ಲಿಗೆ ಹೋಗಿ ಬರಲೆಂದು

ಬೆಳಗ್ಗೆ 10.30 ರ ಸಮಯದಲ್ಲಿ ನಮ್ಮ ಗ್ರಾಮದಿಂದ ಬೆಳಗ್ಗೆ 11.30 ರ ಸಮಯದಲ್ಲಿ ಆಟೋದಲ್ಲಿ ನ್ಯಾಮತಿ ಟೌನ್ ನ ಮಹಂತೇಶ್ವರ ಕಲ್ಯಾಣ ಮಂಟಪದ ಎದುರು ರಸ್ತೆಯ ಎಡಬದಿಯಲ್ಲಿ ನಿಂತುಕೊಂಡು ಅದೇ ವೇಳೆಗೆ ಸುರಹೊನ್ನೆ ಕಡೆಯಿಂದ ನ್ಯಾಮತಿ ಟೌನ್ ಕಡೆಗೆ ಹೊನ್ನಾಳಿ ಕಡೆಗೆ ಹೋಗಲು ಗಜಾನನ ಬಸ್ ಚಾಲಕ ತನ್ನ ಬಸ್ ನ್ನು ಅತೀವೇಗ ಹಾಗು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಬಸ್ ನ ನಿಯಂತ್ರಣ ತಪ್ಪಿ ಚೆನ್ನಮ್ಮ ರವರಿಗೆ ಡಿಕ್ಕಿಯಾಗಿದ್ದರಿಂದ ಚೆನ್ನಮ್ಮರವರು ಕೆಳಗಡೆ ಬಿದ್ದಾಗ ಅವರ ಬಲಗಾಲು ಬಸ್ ನ ಮುಂದಿನ ಗಾಲಿಗೆ ಸಿಕ್ಕಿಹಾಕಿಕೊಂಡಿತ್ತು ಎಂದರೆ ಸರಿಯಲ್ಲ. ತಕ್ಷಣ ಅಲ್ಲಿಯೇ ಇದ್ದ ನಾನು , ಚಾಸಾ 3 ಹಾಗೂ ಬಸ್ ನ ಕಂಡಕ್ಟರ್ ಆದ ಚಾಸಾ 4 ರವರು ಚೆನ್ನಮ್ಮ ರವರನ್ನು ಉಪಚರಿಸಿ ನೋಡಿದಾಗಚೆನ್ನಮ್ಮ ರವರಿಗೆ ಬಲಗಾಲಿಗೆ ಪೆಟ್ಟು ಬಿದ್ದು ಗಾಯಗಳಾದವು ಎಂದರ ಸರಿಯಲ್ಲ. ಅಪಘಾತಪಡಿಸಿ ಬಸ್ ನಂಬರ್ ಕೆಎ 20 ಎಎ 6856 ಹಾಗೂ ಅದರ ಚಾಲಕನ ಹೆಸರು ಸುರೇಶ ಬಿನ್ ಮಾರಪ್ಪ, ಹೊಸನಗರ ಟೌನ್ ಎಂದು ನನಗೆ ತಿಳಿಯಿತು ಎಂದರೆ ಸರಿಯಲ್ಲ. ನಂತರ ಯಾವುದೇ ಒಂದು ವಾಹನದಲ್ಲಿ ಚೆನ್ನಮ್ಮರವರನ್ನು ನ್ಯಾಮತಿ ಸಮುದಾಯ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಪ್ರಥಮ ಚಿಕಿತ್ಸೆ ಕೊಡಿಸಿ ವೈದ್ಯರ ಸಲಹೆಯ ಮೇರೆಗೆ 108 ಆ್ಯಂಬುಲೆನ್ಸ್ ನಲ್ಲಿ ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ಕರೆದುಕೊಂಡು ಹೋದೆವು ಎಂದರೆ ಸರಿಯಲ್ಲ.

ದಿಃ 10.10.2022 ರಂದು ಮಧ್ಯಾಹ್ನ 12.50 ಕ್ಕೆ ಚೆನ್ನಮ್ಮರವರು ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿರುತ್ತಾರೆ ಎಂದು ನನಗೆ ತಿಳಿಯಿತು ಎಂದರೆ ಸರಿಯಲ್ಲ. ಈ ಪ್ರಕರಣದ ಸಂಬಂಧ ನಾನು ಪೋಲೀಸರಿಗೆ ಹೇಳಿಕೆ ಮತ್ತು ಮುಂದುವರೆದ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಒಪ್ಪದ ಹೇಳಿಕೆಯನ್ನು ನಿಪಿ 10 ಮತ್ತು 11 ಎಂದು ಗುರುತಿಸಲಾಯಿತು.

ಎಲ್ಲಾ ವಿಚಾರಗಳು ಗೊತ್ತಿದ್ದರೂ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

<u>ಪಾಟೀ ಸವಾಲುಃ- ಆರೋಪಿ ಪರ ವಕೀಲರಿಂದಃ-</u>

ಆರೋಪಿ ಪರ ವಕೀಲರು ಪಾಟೀ ಸವಾಲು ಏನು ಇಲ್ಲ ಎಂದು ತಿಳಿಸಿದ ಮೇರೆಗೆ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆ ಇಲ್ಲ.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.